ಬೆವಿಕಂ
BESCOM

# ಬೆಸ್ಕಾಂ ಸ್ನೇಹಿ


ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ ಗೃಹಪತ್ರಿಕೆ

ಸಂಪುಟ-9 ಸಂಚಿಕೆ-1 | ತ್ರೈಮಾಸಿಕ ಜನವರಿ-ಮಾರ್ಚ್ 2022 | ಪುಟಗಳು-12




ಬೆವಿಕಂ
BESCOM

# ಬೆವಿಕಂ ಕಾರ್ಯಾಲಯದಲ್ಲಿ ನಡೆದ 73 ನೇ ಗಣರಾಜ್ಯೋತ್ಸವ ಆಚರಣೆ















**ಆತ್ಮೀಯ ಸಹೋದ್ಯೋಗಿ ಬಂಧುಗಳೇ,**

ಕಳೆದ ಹಲವು ತಿಂಗಳುಗಳಿಂದ ನಿಮ್ಮ ಪರಿಶ್ರಮವು ಸ್ಫೂರ್ತಿದಾಯಕವಾಗಿದೆ. ನಮ್ಮ ಸಿಬ್ಬಂದಿಗಳು ಹಾಗೂ ಅಧಿಕಾರಿಗಳು ಅತ್ಯಂತ ತಾಳ್ಮೆಯಿಂದ, ಗ್ರಾಹಕರಿಗೆ ಉತ್ತಮ ಸೇವೆಯನ್ನು ನೀಡುವ ನಿಟ್ಟಿನಲ್ಲಿ ನಿರಂತರವಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಈ ನಡುವೆ, ಕೋವಿಡ್ ಕರಾಳ ಛಾಯೆ ಇನ್ನೂ ಆವರಿಸಿರುವುದರಿಂದ ಅದರ ಕುರಿತಾದ ಮುಂಜಾಗ್ರತಾ ಕ್ರಮಗಳನ್ನು ಸದಾ ಅನುಸರಿಸುವುದರ ಜೊತೆಗೆ, ಸದಾ ಮಾಸ್ಕ್ ಧರಿಸಬೇಕಾಗಿ ವಿನಂತಿಸುತ್ತಿದ್ದೇನೆ.

ಮೊದಲಿಗೆ ನಮ್ಮ ಎಲ್ಲಾ ಸಿಬ್ಬಂದಿಗಳಿಗೂ ಹಾಗೂ ಅಧಿಕಾರಿಗಳಿಗೂ ಮಕರ ಸಂಕ್ರಾಂತಿಯ ಹಾಗೂ ಮಹಾ ಶಿವರಾತ್ರಿಯ ಹಾರ್ದಿಕ ಶುಭಾಶಯಗಳನ್ನು ಕೋರುತ್ತಿದ್ದೇನೆ. ನಿಮಗೂ ಹಾಗೂ ನಿಮ್ಮ ಕುಟುಂಬದವರಿಗೂ ದೇವರು ಸಕಲ ಸೌಭಾಗ್ಯಗಳನ್ನಿತ್ತು ಹರಸಲಿ.

ಈಗಾಗಲೇ ಬೆಸ್ಕಾಂ ಕಾರ್ಯವ್ಯಾಪ್ತಿಯಲ್ಲಿ ಹೆಚ್.ಟಿ ಮೇಲ್ಮಾರ್ಗ ತಂತಿಗಳನ್ನು ಭೂಗತ ಕೇಬಲ್‌ಗಳಾಗಿ ಪರಿವರ್ತಿಸುವ ಯೋಜನೆ ಪ್ರಗತಿಯಲ್ಲಿದ್ದು, ಈ ವಿಧಾನದಿಂದ ಗ್ರಾಹಕರಿಗೆ ಉತ್ತಮ ಗುಣಮಟ್ಟದ ವಿದ್ಯುತ್ ಪೂರೈಕೆ ಸಾಧ್ಯವಾಗಲಿದೆ. ಇಲ್ಲಿಯವರೆಗೆ ಸರಿಸುಮಾರು 5,651 ಕಿ.ಮೀಗಳಷ್ಟು ಮೇಲ್ಮಾರ್ಗ ವಿದ್ಯುತ್ ತಂತಿಗಳನ್ನು ಭೂಗತ ವಿದ್ಯುತ್ ಕೇಬಲ್‌ಗಳಾಗಿ ಬೆಸ್ಕಾಂ ಪರಿವರ್ತಿಸಿದೆ. ಅದಲ್ಲದೆ, ನಗರದ ಎಲ್.ಟಿ ವಿದ್ಯುತ್ ಮೇಲ್ಮಾರ್ಗ ತಂತಿಗಳನ್ನು ಸುರಕ್ಷಿತ ಇನ್ಸುಲೇಟೆಡ್ ಏರಿಯಲ್ ಬಂಡಲ್ಡ್ ಕೇಬಲ್‌ಗಳಾಗಿ ಪರಿವರ್ತಿಸಲಾಗುತ್ತಿದ್ದು, ಈಗಾಗಲೇ 3750 ಕಿ.ಮೀ ಗಳಷ್ಟು ಎಲ್.ಟಿ ವಿದ್ಯುತ್ ತಂತಿಗಳನ್ನು ಭೂಗತ ವಿದ್ಯುತ್ ಕೇಬಲ್‌ಗಳಾಗಿ ಪರಿವರ್ತಿಸಲಾಗಿದೆ.

ಬೇಸಿಗೆ ಕಾಲವು ಸಮೀಪಿಸುತ್ತಿರುವುದರಿಂದ ಗ್ರಾಹಕರಿಗೆ ನಿರಂತರ ಉತ್ತಮ ಗುಣಮಟ್ಟದ ವಿದ್ಯುತ್ ಪೂರೈಕೆ ನೀಡುವಲ್ಲಿ ನಾವು ನಮ್ಮ ಶ್ರಮವನ್ನು ದ್ವಿಗುಣಗೊಳಿಸಿಕೊಳ್ಳಬೇಕಾಗಿದೆ. ಈ ಬೇಸಿಗೆ ಸಂದರ್ಭದಲ್ಲಿ ನೀರಾವರಿಗಾಗಿ ಗ್ರಾಮೀಣ ಭಾಗದ ರೈತರ ಕೃಷಿ ಪಂಪ್‌ಸೆಟ್‌ಗಳಿಗೆ ನಿರಂತರ ಉತ್ತಮ ಗುಣಮಟ್ಟದ ವಿದ್ಯುತ್ ಪೂರೈಕೆ ನೀಡಬೇಕಾದದ್ದು ಬೆಸ್ಕಾಂನ ಕರ್ತವ್ಯ. ಅದಲ್ಲದೆ, ಬೇಸಿಗೆಯ ಕಾಲದಲ್ಲಿ ವಿದ್ಯುತ್ ಬೇಡಿಕೆಯು ಅಧಿಕವಾಗಿರುವುದರಿಂದ ಅದನ್ನು ಪೂರೈಸುವಲ್ಲಿ ತಮ್ಮೆಲ್ಲರ ಸಹಕಾರವನ್ನು ಕೋರುತ್ತಿದ್ದೇನೆ.

ನಮ್ಮ ಬೆಸ್ಕಾಂನ ಆನ್‌ಲೈನ್ ಸೇವೆಗಳು ಜನತೆಯನ್ನು ಬಹಳ ಪರಿಣಾಮಕಾರಿಯಾಗಿ ತಲುಪುತ್ತಿರುವುದು ಬಹಳ ಸಂತಸದ ವಿಷಯವಾಗಿದೆ. ಗ್ರಾಹಕರಿಗೆ ಬೆಸ್ಕಾಂ ಸೇವೆಗಳ ಕುರಿತಾದ ಮಾಹಿತಿಗಳು, ವಿಚಾರಣೆಗಳು ಹಾಗೂ ಸಂದೇಹಗಳನ್ನು ಪರಿಹರಿಸುವುದಲ್ಲದೆ ಅವರ ಪ್ರಶಂಸೆಗಳನ್ನು ವ್ಯಕ್ತಪಡಿಸಲು ವೇದಿಕೆಯನ್ನು ಒದಗಿಸಲಾಗಿದೆ. ಆ ನಿಟ್ಟಿನಲ್ಲಿ ಬೆಸ್ಕಾಂನ ಆನ್‌ಲೈನ್ ಸೇವೆಗಳ ಕುರಿತಾಗಿ ತಾವೆಲ್ಲರೂ ಇನ್ನಷ್ಟು ಅರಿತುಕೊಂಡು, ಗ್ರಾಹಕರಿಗೆ ತ್ವರಿತಗತಿಯ ಸ್ಪಂದನೆ ನೀಡುವಲ್ಲಿ ಸಹಕರಿಸಬೇಕಿದೆ.

ಗ್ರಾಹಕರಿಗೆ ಅಡಚಣೆಯಿಲ್ಲದ ನಿರಂತರ ವಿದ್ಯುತ್ ಪೂರೈಕೆ ನೀಡುವ ನಿಟ್ಟಿನಲ್ಲಿ, ಬೆಸ್ಕಾಂ ಕಾರ್ಯವ್ಯಾಪ್ತಿಯಲ್ಲಿ ಪರಿವರ್ತಕ ದುರಸ್ತಿ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ವಿಫಲಗೊಂಡ ಪರಿವರ್ತಕಗಳನ್ನು ಕೇವಲ 24 ಗಂಟೆಗಳ ಅವಧಿಯೊಳಗೆ ದುರಸ್ತಿಗೊಳಿಸಲು ಬೆಸ್ಕಾಂನ ಸಿಬ್ಬಂದಿ ವರ್ಗದವರು ಶ್ರಮಿಸುತ್ತಿದ್ದು, ಸಮಯದ ಮಿತಿಯೊಳಗೆ ವಿಫಲ ಪರಿವರ್ತಕಗಳನ್ನು ಮರುಸ್ಥಾಪಿಸುವಲ್ಲಿ ನಮ್ಮ ಸಿಬ್ಬಂದಿ ವರ್ಗದವರು ಇನ್ನಷ್ಟು ಮುತುವರ್ಜಿ ವಹಿಸಬೇಕಿದೆ.

ನಮ್ಮ ಗ್ರಾಹಕರ ನಿರೀಕ್ಷೆಯ ಮಟ್ಟಕ್ಕಿಂತಲೂ ಉತ್ತಮವಾಗಿ ಸೇವೆ ಸಲ್ಲಿಸುತ್ತಿರುವ ತಮ್ಮೆಲ್ಲರ ಪರಿಶ್ರಮಕ್ಕೆ ನಾನು ಆಭಾರಿಯಾಗಿದ್ದೇನೆ. ತಾವೆಲ್ಲರೂ ಗ್ರಾಹಕರ ಸೇವೆಯಲ್ಲಿ ಇನ್ನಷ್ಟು ತೊಡಗಿಸಿಕೊಳ್ಳುವಂತಾಗಲಿ ಎಂದು ಆಶಿಸುತ್ತೇನೆ.

**ಪಿ.ರಾಜೇಂದ್ರ ಚೋಳನ್**
ವ್ಯವಸ್ಥಾಪಕ ನಿರ್ದೇಶಕರು, ಬೆವಿಕಂ

## ಸಂಪಾದಕೀಯ



ಆತ್ಮೀಯರೆ,

ನಮ್ಮ ನಿಮ್ಮೆಲ್ಲರ **'ಬೆಸ್ಕಾಂಸ್ನೇಹಿ'** ತ್ರೈಮಾಸಿಕ ಈ ಸಂಚಿಕೆಯೊಂದಿಗೆ 9ನೇ ವರ್ಷಕ್ಕೆ ಕಾಲಿಟ್ಟಿದೆ. ಹಾಗೂ ಬೆಸ್ಕಾಂ ಸಂಸ್ಥೆಯ ಗೃಹಪತ್ರಿಕೆಯಾಗಿ ಅದರ ವ್ಯಾಪ್ತಿಯಲ್ಲಿರುವ ಎಂಟು ಜಿಲ್ಲೆಗಳ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರಿಗೆ ಹಲವು ಉಪಯುಕ್ತ ಮಾಹಿತಿಗಳನ್ನು ನೀಡುತ್ತಾ ಬಂದಿದೆ.

ಆದರೆ ಇದು ತಮ್ಮೆಲ್ಲರ ಪ್ರಾತಿನಿಧಿಕ ಪತ್ರಿಕೆಯಾಗಬೇಕೆಂದು ನಮ್ಮ ಆಶಯ. ಇದಕ್ಕೆ ಎಲ್ಲರಿಂದ ಸಕಾರಾತ್ಮಕ ಪ್ರತಿಕ್ರಿಯೆಬೇಕು. ನಿಮ್ಮ ಅನುಭವ ಆಧಾರಿತ ಪ್ರವಾಸ ಕಥನ, ಪ್ರಬಂಧ, ಕತೆ, ಕವನ ಇತ್ಯಾದಿ ವೈಚಾರಿಕ ಲೇಖನಗಳನ್ನು ಬರೆದು ಕಳುಹಿಸಿ ಪ್ರೋತ್ಸಾಹಿಸಿದರೆ ಅದು ಸಾಧ್ಯ. ಈ ನಿಟ್ಟಿನಲ್ಲಿ ತಾವೆಲ್ಲರೂ ಆಲೋಚಿಸುತ್ತೀರೆಂದು ಭಾವಿಸಿದ್ದೇನೆ.

ಕಳೆದ ಎರಡು ವರ್ಷಗಳಿಂದ ಇಡೀ ವಿಶ್ವವನ್ನೇ ಕಾಡುತ್ತಿರುವ ಕೋವಿಡ್ ಸಾಂಕ್ರಾಮಿಕ ಹಾವಳಿ ಇನ್ನೂ ಸಂಪೂರ್ಣವಾಗಿ ನಿಯಂತ್ರಣಕ್ಕೆ ಬಂದಿಲ್ಲ. ಅದರ ನಡುವೆಯೇ ನಾವು ಕಾರ್ಯನಿರ್ವಹಿಸಬೇಕಾದ ಅನಿವಾರ್ಯತೆ ಇದೆ. ಎಲ್ಲರೂ ಕೋವಿಡ್ ಮುನ್ನೆಚ್ಚರಿಕೆ ಕ್ರಮಗಳನ್ನು ತಪ್ಪದೇ ಪಾಲಿಸಿಕೊಂಡು ತಮ್ಮ ಕರ್ತವ್ಯ ನಿಭಾಯಿಸಬೇಕೆಂಬುದು ನನ್ನ ಕಳಕಳಿಯ ಮನವಿ. ಎಚ್ಚರಿಕೆ ತಪ್ಪಿದರೆ ನಮ್ಮ ಜೀವಕ್ಕೆ ಅಪಾಯ ತಪ್ಪಿದ್ದಲ್ಲ. **ಜೀವ ಇದ್ದರೇ ಜೀವನ** ಎಂಬ ಅಂಶವನ್ನು ಎಲ್ಲರೂ ಮನಗಾಣಬೇಕು. ಇರುವ ವ್ಯವಸ್ಥೆಯಲ್ಲೇ ಗ್ರಾಹಕರಿಗೆ ಸುಗಮ ವಿದ್ಯುತ್ ಪೂರೈಸುವ ಜವಾಬ್ದಾರಿ ನಮ್ಮ ಮೇಲೆ ಇದೆ.

ಗ್ರಾಹಕರಿಂದ ದೂರುಗಳು ಬರದಂತೆ ಮುಂಜಾಗರೂಕತೆಯಿಂದ ಕಾರ್ಯನಿರ್ವಹಿಸಬೇಕಾಗಿರುತ್ತದೆ ಹಾಗೂ ದೂರು ಬಂದ ನಂತರ ಕೂಡ ಅವುಗಳಿಗೆ ಸೂಕ್ತ ಪರಿಹಾರ ದೊರಕಿಸುವುದು ನಮ್ಮ ನಿಮ್ಮೆಲ್ಲರ ಕರ್ತವ್ಯವಾಗಿದೆ. ಈ ನಿಟ್ಟಿನಲ್ಲಿ ತಾವೆಲ್ಲರೂ ಕಾರ್ಯೋನ್ಮುಖರಾಗಿ ಸಹಕರಿಸಬೇಕೆಂದು ಕೋರುತ್ತೇನೆ.

ತಮ್ಮೆಲ್ಲರಿಗೂ ಹೊಸ ವರ್ಷ ಹಾಗು ಶಿವರಾತ್ರಿ ಹಬ್ಬದ ಶುಭಾಶಯಗಳು.

ವಂದನೆಗಳೊಂದಿಗೆ,

**ಆರ್.ವೆಂಕಟೇಶ್‌ಮೂರ್ತಿ**
ಪ್ರಧಾನ ವ್ಯವಸ್ಥಾಪಕರು (ಗ್ರಾ.ಸಂ.), ಬೆವಿಕಂ.

# ನಮ್ಮ ಊರು, ನಮ್ಮ ಜಿಲ್ಲೆ ಮಂಡ್ಯ




ಬೆಂಗಳೂರು-ಮೈಸೂರು ನಡುವಿನ ಹೆದ್ದಾರಿಯಲ್ಲಿ ಸಿಗುವ ಪ್ರಮುಖ ಜಿಲ್ಲಾ ಕೇಂದ್ರ ಮಂಡ್ಯ.

ಕಾವೇರಿ ನದಿ ನೀರಿನ ಸೌಲಭ್ಯವಿರುವುದರಿಂದ ಭತ್ತ ಮತ್ತು ಕಬ್ಬನ್ನು ಹೇರಳವಾಗಿ ಬೆಳೆಯುವ ಜಿಲ್ಲೆಯೂ ಆಗಿದೆ.

ಹಲವು ಪುರಾಣ ಪ್ರಸಿದ್ಧ ತಾಣಗಳು ಹಾಗೂ ಪ್ರವಾಸಿ ಸ್ಥಳಗಳಿಗೆ ಈ ಜಿಲ್ಲೆ ಹೆಸರುವಾಸಿಯಾಗಿದೆ.

ಮಂಡ್ಯ, ಮದ್ದೂರು, ಮಳ್ಳವಳ್ಳಿ, ನಾಗಮಂಗಲ, ಪಾಂಡವಪುರ, ಶ್ರೀರಂಗಪಟ್ಟಣ ಹಾಗೂ ಕೃಷ್ಣರಾಜಪೇಟೆ ಸೇರಿದಂತೆ ಒಟ್ಟು 7 ತಾಲ್ಲೂಕುಗಳು ಈ ಜಿಲ್ಲೆಯಲ್ಲಿವೆ.

ಜನಸಂಖ್ಯೆ ಸುಮಾರು 17ಲಕ್ಷ. ಈ ಜಿಲ್ಲೆಯ ಜೀವನದಿ ಕಾವೇರಿ.

**ಕೃಷ್ಣರಾಜಸಾಗರ** : ಈ ಜಲಾಶಯಕ್ಕೆ ಹೊಂದಿಕೊಂಡಿರುವ ಬೃಂದಾವನ ಹೂದೋಟ, ಸಂಗೀತ ಕಾರಂಜಿ,



ಆಲಂಕಾರಿಕ ವಿದ್ಯುತ್ತಿನ ದೀಪಗಳು ದೇಶಾದ್ಯಂತ ಪ್ರವಾಸಿಗರ ಪ್ರಮುಖ ಆಕರ್ಷಣೆಯಾಗಿವೆ. ಇದರಿಂದ ಈ ಅಣೆಕಟ್ಟೆ ವಿಶ್ವವಿಖ್ಯಾತಿಯನ್ನು ಪಡೆದಿದೆ.

ಈ ಅಣೆಕಟ್ಟೆಯ ನಿರ್ಮಾಣಕ್ಕೆ ಮೊದಲು ಕಾವೇರಿ ನದಿಯ ಎಡದಂಡೆ ಮೇಲೆ ಕಣ್ವಪುರಿ ಎಂಬ ಪುರಾಣ ಪ್ರಸಿದ್ಧವಾದ ಕನ್ನಂಬಾಡಿ ಗ್ರಾಮವಿತ್ತು. ಇಲ್ಲಿ ಹಲವು ಪ್ರಸಿದ್ಧ ದೇವಾಲಯಗಳಿದ್ದವು.

ಅವುಗಳಲ್ಲಿ ಶಿಲ್ಪಚಾತುರ್ಯದಿಂದ ಹೆಸರಾಗಿದ್ದ ಗೋಪಾಲಕೃಷ್ಣ ದೇವಾಲಯ, ಕಣ್ವೇಶ್ವರ ಶಿವಾಲಯ ಮತ್ತು ಮಹಾಲಕ್ಷ್ಮೀ ದೇವಾಲಯಗಳು ಕಾವೇರಿ ಜಲಾಶಯದ ನಿರ್ಮಾಣದಲ್ಲಿ ಕೆಳಗಿದ್ದ ಕೆಲವು ಗ್ರಾಮಗಳೊಡನೆ ಮುಳುಗಡೆಯಾದವು.

ಕಾವೇರಿ ನದಿಗೆ ಅಡ್ಡಲಾಗಿ ಕಟ್ಟಿರುವ ಈ ಅಣೆಕಟ್ಟೆ ಲಕ್ಷಾಂತರ ಕೃಷಿಕರಿಗೆ ಹಾಗೂ ಜನರಿಗೆ ವರದಾಯಕವಾಗಿದೆ.

ಆಗ ಮೈಸೂರು ಸಂಸ್ಥಾನದ ಅರಸರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಹಾಗೂ ಮುಖ್ಯ ಎಂಜಿನಿಯರ್ ಸರ್.ಎಂ.ವಿಶ್ವೇಶ್ವರಯ್ಯನವರು ಈ ಯೋಜನೆಯ ರೂವಾರಿಗಳಾಗಿದ್ದಾರೆ.

**ಕೊಕ್ಕರೆ ಬೆಳ್ಳೂರು** : ಮದ್ದೂರಿಗೆ ಸಮೀಪದಲ್ಲಿರುವ ಕೊಕ್ಕರೆ ಬೆಳ್ಳೂರು ಎಂಬ ಹಳ್ಳಿಯು ಅದರ ಹೆಸರೇ ಹೇಳುವಂತೆ ಕೊಕ್ಕರೆ ಪಕ್ಷಿಗಳಿಗೆ ಆಸರೆ ನೀಡಿರುವ ಒಂದು ಪಕ್ಷಿಧಾಮ.

ಇಲ್ಲಿನ ವಿಶೇಷವೆಂದರೆ ಬೆಳ್ಳೂರಿನ ಗ್ರಾಮದ ಜನರಿಗೂ ಮತ್ತು ವಿದೇಶಗಳಿಂದ ವಲಸೆ ಬರುವ ಕೊಕ್ಕರೆಗಳಿಗೂ ಅತಿಯಾದ ನಂಟು.

ಗ್ರಾಮದ ಹೊರವಲಯದಲ್ಲಿರುವ ನೂರಾರು ಮರಗಳಲ್ಲಿ ಈ ಪಕ್ಷಿಗಳು ನೆಲೆಸುತ್ತವೆ, ಗೂಡನ್ನು ಕಟ್ಟಿ, ಮೊಟ್ಟೆ ಇಟ್ಟು, ಮರಿಗಳನ್ನು ಬೆಳೆಸಿ, ಸಲಹಿ ನಂತರ ಅವುಗಳನ್ನು ಜೊತೆಯಲ್ಲಿ ಕರೆದುಕೊಂಡು ಸಾವಿರಾರು ಮೈಲಿಗಳ ತಮ್ಮ ತಾಣಗಳಿಗೆ ಹಿಂದಿರುಗುತ್ತವೆ.

ಮುಖ್ಯವಾಗಿ ಇಲ್ಲಿಗೆ ಪೆಲಿಕಾನ್ ಮತ್ತು ಪೆಯಿಂಟೆಡ್ ಸ್ಟಾರ್ಕ್ ಕೊಕ್ಕರೆಗಳು ಬರುತ್ತವೆ. ಸಾಮಾನ್ಯವಾಗಿ ಮಾರ್ಚ್ ತಿಂಗಳಿನಲ್ಲಿ ಅವುಗಳ ವಲಸೆ ಆರಂಭವಾಗುತ್ತದೆ.

**ರಂಗನ ತಿಟ್ಟು**: ಕಾವೇರಿನದಿಯ ಹಿನ್ನೀರಿನಲ್ಲಿರುವ ಈ ಪಕ್ಷಿಧಾಮ ಶ್ರೀರಂಗಪಟ್ಟಣಕ್ಕೆ ಹತ್ತಿರದಲ್ಲಿದೆ. ಸಾವಿರಾರು ಪಕ್ಷಿಗಳು ಇಲ್ಲಿ ನೆಲೆಸಿ ಸಂತತಿಯನ್ನು ವೃದ್ಧಿಸಲು ಅನುಕೂಲವಾಗುವಂತೆ ನೂರಾರು ಗಿಡಮರಗಳು ಈ ಸ್ಥಳದಲ್ಲಿವೆ.



ಸುತ್ತಲೂ ನೀರಿನಿಂದ ಆವೃತವಾಗಿರುವುದರಿಂದ ಪಕ್ಷಿಗಳು ಸುರಕ್ಷಿತವಾಗಿ ಸಂತಾನೋತ್ಪತ್ತಿಯನ್ನು ಮಾಡಬಹುದು.

ವಿದೇಶದಿಂದ ಬರುವ ಸಹಸ್ರಾರು ಪಕ್ಷಿಗಳು ಇಲ್ಲಿ ನೋಡಲು ಸಿಗುವುದರಿಂದ ಪಕ್ಷಿ ವೀಕ್ಷಕರಿಗೆ ಇದೊಂದು ಸ್ವರ್ಗವಿದ್ದಂತೆ.

**ಚೆಲುವನಾರಾಯಣಸ್ವಾಮಿ:** ಈ ಜಿಲ್ಲೆಯ ಮೇಲುಕೋಟೆ ಶ್ರೀವೈಷ್ಣವ ಪಂಥದವರ ಪ್ರಸಿದ್ಧ ಯಾತ್ರಾಸ್ಥಳ ಸಂತ ರಾಮಾನುಜರು 12ನೇ ಶತಮಾನದಲ್ಲಿ

ತಮಿಳುನಾಡಿನಿಂದ ಮೇಲುಕೋಟೆಗೆ ಬಂದು ನೆಲೆಸಿ ತಮ್ಮ ಪಂಥವನ್ನು ಪ್ರಚುರಪಡಿಸಿದರು.

ಚೆಲುವನಾರಾಯಣಸ್ವಾಮಿ ಇಲ್ಲಿನ ಪ್ರಮುಖ ದೇವತೆ. ಪ್ರತಿ ವರ್ಷವೂ ಬೇಸಿಗೆಯಲ್ಲಿ ವೈರಮುಡಿ ಎಂಬ ಉತ್ಸವ ನಡೆಯುತ್ತದೆ. ಆ ಸಮಯದಲ್ಲಿ ಇಲ್ಲಿ ಸಹಸ್ರಾರು ಭಕ್ತರು ಸೇರುತ್ತಾರೆ.

ಇಲ್ಲಿನ ಬೆಟ್ಟದ ಮೇಲೆ ನರಸಿಂಹ ಸ್ವಾಮಿಯ ದೇಗುಲವಿದೆ. ಹೆಬ್ಬಂಡೆಗಳ ಮಧ್ಯದಲ್ಲಿ ಅತ್ಯಂತ ಸಾಹಸಪಟ್ಟು ಅದನ್ನು ನಿರ್ಮಿಸಿದ್ದಾರೆ.



ಈ ಮಲೆ ದೇಗುಲದಲ್ಲಿ ನರಸಿಂಹಸ್ವಾಮಿಯು ಯೋಗಮುದ್ರೆಯಲ್ಲಿ ಕುಳಿತಿದ್ದಾನೆ.

ಮೇಲುಕೋಟೆಯಲ್ಲಿ ಅನೇಕ ತೀರ್ಥಕ್ಷೇತ್ರಗಳು, ಪುಷ್ಕರಣಿಗಳು, ಮಂಟಪಗಳು ಮತ್ತು ಮಠಗಳು ಇವೆ.

**ಆದಿ ರಂಗನಾಥ ಸ್ಥಳ**: ಕಾವೇರಿ ನದಿಯ ದಂಡೆಯ ಮೇಲಿರುವ ಸ್ಥಳ ಶ್ರೀರಂಗಪಟ್ಟಣ. ಹಲವು ರಾಜರ ಆಡಳಿತಕ್ಕೆ ಒಳಪಟ್ಟ ಇಲ್ಲಿ ಹತ್ತಾರು ದೇಗುಲಗಳು ಮತ್ತು ಕೋಟೆ ಇದೆ.

ಇಲ್ಲಿನ ಆದಿದೈವವೇ ಶ್ರೀರಂಗನಾಥಸ್ವಾಮಿ. ರಂಗನಾಥಸ್ವಾಮಿ ನಾಮಬಲದಿಂದಲೇ ಊರಿಗೆ ಶ್ರೀರಂಗಪಟ್ಟಣ ಎಂಬ ಹೆಸರು ಬಂದಿರುವುದು.

ಕನ್ನಡ ನಾಡಿನ ಅತಿದೊಡ್ಡ ದೇವಾಲಯಗಳ ಪೈಕಿ ಇದೂ ಒಂದಾಗಿದೆ. ಐದು ಅಂತಸ್ತಿನ ಅದರ ಭವ್ಯ ಗೋಪುರ ದೂರದಿಂದಲೇ ಯಾತ್ರಿಕರ ಕಣ್ಮನಗಳನ್ನು ಸೆಳೆಯುತ್ತದೆ.

ಶ್ರೀರಂಗಪಟ್ಟಣದಲ್ಲಿ ನೋಡಲೇ ಬೇಕಾದ ಹಲವು ಸ್ಥಳಗಳಿವೆ. ದರಿಯಾ ದೌಲತ್, ಗಂಜಾಂ ಬಳಿ ಇರುವ ಗುಂಬಜ್, ನಿಮಿಷಾಂಬಾ ದೇವಿಯ ಗುಡಿ ಪ್ರಮುಖವಾದವು.

**ಶಿವನ ಸಮುದ್ರ**: ಇಲ್ಲಿ ಕಾವೇರಿ ನದಿಯು ಎರಡು ಕವಲುಗಳಾಗಿ ಒಡೆದು ಒಂದು ಬೃಹತ್ ಬಂಡೆಯ ಮೇಲಿನಿಂದ ನದಿಯು ಪ್ರಪಾತಕ್ಕೆ ಧುಮುಕುತ್ತದೆ. ಸಮೀಪದಲ್ಲಿಯೇ ಇನ್ನೊಂದು ಕವಲು ಧುಮುಕುತ್ತದೆ.

ಈ ಎರಡೂ ಜಲಪಾತಗಳು ಗಗನಚುಕ್ಕಿ ಮತ್ತು ಭರಚುಕ್ಕಿ ಎಂಬ ಹೆಸರುಗಳಿಂದ ಪ್ರಸಿದ್ಧಿಯಾಗಿವೆ.

ಸುಂದರವಾದ ವನಸಿರಿಯ ಮಧ್ಯದಲ್ಲಿರುವ ಈ ಜಲಪಾತಗಳು ನೋಡಲು ಬಹಳ ಆಕರ್ಷಣೀಯವಾಗಿವೆ.

ಈ ಜಲಪಾತಗಳ ನೀರಿನ ಸಹಾಯದಿಂದ ಭಾರತದ ಮೊಟ್ಟಮೊದಲ ಜಲವಿದ್ಯುತ್ ಉತ್ಪಾದನಾ ಕೇಂದ್ರವು ಶಿವನಸಮುದ್ರದಲ್ಲಿ 1902ರಲ್ಲಿ ಸ್ಥಾಪನೆಯಾಯಿತು.

**ಕಾವೇರಿ ತೀರದ ರಮ್ಯತಾಣ ಮುತ್ತತ್ತಿ**: ಮಳವಳ್ಳಿ ತಾಲ್ಲೂಕಿನ ಹಲಗೂರು ಸಮೀಪವಿರುವ ಮುತ್ತತ್ತಿ ಜಲಧಾಮ ಕಾವೇರಿ ತೀರದಲ್ಲಿರುವ ಒಂದು ರಮ್ಯ ತಾಣವಾಗಿದೆ, ಗಿಡ, ಮರ, ಬೆಟ್ಟಗುಡ್ಡಗಳಿಂದ ಆವೃತವಾಗಿರುವ ಈ ಅರಣ್ಯ ಪ್ರದೇಶ ನಿಸರ್ಗಪ್ರಿಯರಿಗೆ ಹೇಳಿಮಾಡಿಸಿದ ಸ್ಥಳವಾಗಿದೆ. ಇಲ್ಲಿ ಮುತ್ತತ್ತಿರಾಯ ಎಂದು ಕರೆಯಲ್ಪಡುವ ಆಂಜನೇಯ ಸ್ವಾಮಿಯ ದೇವಾಲಯವಿದೆ.

**ಹೊಸಹೊಳಲು ಲಕ್ಷ್ಮೀನಾರಾಯಣ ದೇವಾಲಯ**: ಕೃಷ್ಣರಾಜಪೇಟೆ ಸಮೀಪದಲ್ಲಿರುವ ಹೊಸಹೊಳಲು ಗ್ರಾಮದಲ್ಲಿ ಪ್ರಾಚೀನ ಹೊಯ್ಸಳ ಶೈಲಿಯ ದೇವಾಲಯವು ಅತ್ಯಂತ ಶ್ರೇಷ್ಠ ಕಲಾಕೃತಿಗಳನ್ನು ಹೊಂದಿದೆ. ತ್ರಿಕೂಟಾಚಲ ಮಾದರಿಯ ಈ ದೇವಾಲಯದ ಪ್ರಧಾನ ಗರ್ಭಗೃಹದಲ್ಲಿ ಲಕ್ಷ್ಮೀನಾರಾಯಣನ ಸುಂದರಮೂರ್ತಿ ಇದೆ. ಉಳಿದೆರಡು ಗರ್ಭಗೃಹಗಳಲ್ಲಿ ಲಕ್ಷ್ಮೀನರಸಿಂಹ ಮತ್ತು ವೇಣುಗೋಪಾಲರ ಮೂರ್ತಿಗಳಿವೆ.



ಹೊಯ್ಸಳರ ದೇವಾಲಯಗಳಲ್ಲಿ ಇದೂ ಸಹ ಪ್ರಖ್ಯಾತವಾಗಿದೆ.

**ಬಸರಾಳು ಮಲ್ಲಿಕಾರ್ಜುನ ಶಿವಾಲಯ**: ಮಂಡ್ಯದಿಂದ 25ಕಿ.ಮೀ ದೂರದಲ್ಲಿರುವ ಬಸರಾಳು ಪುರಾತನ ಪ್ರಸಿದ್ಧವಾದ ಗ್ರಾಮ. ಈ ಊರಿನ ಮಧ್ಯದಲ್ಲಿ ಹೊಯ್ಸಳರ ಶೈಲಿಯಲ್ಲಿ ನಿರ್ಮಿತವಾಗಿರುವ ಮಲ್ಲಿಕಾರ್ಜುನ ಶಿವ ದೇವಾಲಯವನ್ನು ಬೇಲೂರು, ಹಳೇಬೀಡು ಮತ್ತು ಸೋಮನಾಥಪುರ ದೇವಾಲಯಗಳ ಶಿಲ್ಪಕಲಾ ವೈಭವಗಳ ಜತೆಗೆ ಸೇರಿಸಬಹುದು.

ಹೀಗೆ ಹಲವು ಪ್ರವಾಸಿತಾಣಗಳ ಜಿಲ್ಲೆಯನ್ನಾಗಿ ಮಂಡ್ಯವನ್ನು ಗುರುತಿಸಬಹುದು.

## ಸಾಧಕರು ಇವರು

# ಪಿ. ಕಾಳಿಂಗರಾವ್

**'ಕನ್ನಡದ ಕೋಗಿಲೆ'** ಎಂದೇ ಹೆಸರಾಗಿದ್ದ ಗಾಯಕ ಪಾಂಡೇಶ್ವರ ಕಾಳಿಂಗರಾಯರು ಕನ್ನಡನಾಡು ಕಂಡ ಅದ್ಭುತಗಾಯಕ. ಅವರ ಹಾಡನ್ನು ಕೇಳಿ ಆನಂದಿಸದವರೇ ಇಲ್ಲ ಎನ್ನಬಹುದು.

ಪಿ.ಕಾಳಿಂಗರಾಯರು 1914 ರ ಆಗಸ್ಟ್ 31 ರಂದು ಜನಿಸಿದರು. ಚಿಕ್ಕವಯಸ್ಸಿನಲ್ಲೇ ಸಂಗೀತದ ಆಸಕ್ತಿ ಮೂಡಿಸಿಕೊಂಡ ಕಾಳಿಂಗರಾಯರು ಮುಂದೆ ರಾಮಚಂದ್ರ ಬುವಾ ಅಂತಹ ಶ್ರೇಷ್ಠ ಸಂಗೀತಗಾರರ ಶಿಷ್ಯರಾಗಿ ಬೆಳೆದು ನಾಟಕಗಳಲ್ಲಿ ಹಾಡತೊಡಗಿದರು. ನಂತರದಲ್ಲಿ ಮದರಾಸಿಗೆ ಹೋಗಿ ಅಲ್ಲೊಂದು ಸಂಗೀತ ಶಾಲೆಯಲ್ಲಿನ ಅಧ್ಯಾಪಕರಾಗಿ, ಪ್ರಾಂಶುಪಾಲರೂ ಆದರು. ಅಂದಿನ ದಿನಗಳಲ್ಲಿ ಮದರಾಸು ದಕ್ಷಿಣ ಭಾರತದ ಸಿನಿಮಾಗಳ ಪ್ರಧಾನ ಕೇಂದ್ರವಾಗಿತ್ತು. ಅಲ್ಲಿಂದಲೇ ಕಾಳಿಂಗರಾಯರಿಗೆ ಸಿನಿಮಾ ಒಡನಾಟ ಪ್ರಾರಂಭವಾದದ್ದು. ನಿರ್ಮಾಪಕರೂ ಕನ್ನಡ ಚಿತ್ರರಂಗದ ಭೀಷ್ಮರೆನಿಸಿದ್ದ ಆರ್. ನಾಗೇಂದ್ರರಾಯರು ಕಾಳಿಂಗರಾಯರಿಗೆ ಪರಿಚಿತರಾದರು.



ಅವರು ನಿರ್ಮಿಸಿದ 'ವಸಂತಸೇನಾ' ಕನ್ನಡ ಚಲನಚಿತ್ರಕ್ಕೆ ಸಂಗೀತ ನಿರ್ದೇಶಿಸಿದ ಕಾಳಿಂಗರಾಯರು, ಅದೇ ಚಿತ್ರದಲ್ಲಿ ಜೈನ ಸನ್ಯಾಸಿಯ ಪಾತ್ರವನ್ನೂ ನಿರ್ವಹಿಸಿದ್ದರು. ನವಜ್ಯೋತಿ ಸ್ಟುಡಿಯೋದ ಮುಖ್ಯಸ್ಥರಾಗಿದ್ದ ಜಿ.ಆರ್.ರಾಮಯ್ಯನವರ ಕೋರಿಕೆಯ ಮೇರೆಗೆ ಅಲ್ಲಿ ತಯಾರಾಗುವ ಎಲ್ಲಾ ಚಿತ್ರಗಳಿಗೂ ಸಂಗೀತ ನೀಡಲು ಒಪ್ಪಿಕೊಂಡಿದ್ದರು. ಆದರೆ ಹೀಗೆ ಅವರು ಸಂಗೀತ ನೀಡಿದ್ದು 'ಕೃಷ್ಣ ಲೀಲಾ' ಚಿತ್ರಕ್ಕೆ ಮಾತ್ರ. ಈ ಚಿತ್ರದಿಂದ ಕಣಗಾಲ್ ಪ್ರಭಾಕರ ಶಾಸ್ತ್ರಿ ಗೀತರಚನಕಾರರಾಗಿ ಪರಿಚಿತರಾದರೆ, ಡಾ. ರಾಜ್‌ಕುಮಾರ್ ಅವರ ಸಹೋದರ ವರದರಾಜ್ ಮತ್ತು ಸಹೋದರಿ ಶಾರದಮ್ಮ ಅವರುಗಳು ಬೆಳ್ಳಿತೆರೆಗೆ ಬಂದರು.

'ಭಕ್ತ ರಾಮದಾಸ' ಚಿತ್ರದಲ್ಲಿ ಸಂಗೀತ ನೀಡುವಾಗ, ಭಿಕ್ಷೆ ಬೇಡುತ್ತಿದ್ದ ಹುಡುಗಿಯೊಬ್ಬಳ ಕಂಠಸಿರಿಗೆ ಮನಸೋತ ಕಾಳಿಂಗರಾಯರು ಆಕೆಯಿಂದಲೂ ಹಾಡೊಂದನ್ನು ಹಾಡಿಸಿದ್ದರು. 1954ರಲ್ಲಿ ಸಿ.ವಿ.ರಾಜು ಅವರ 'ನಟಶೇಖರ' ಚಿತ್ರಕ್ಕೆ ಸಂಗೀತ ನೀಡಿದರು. ನಾಡಿಗೇರ ಕೃಷ್ಣರಾಯರ ಸಾಹಿತ್ಯವಿದ್ದ ಆ ಚಿತ್ರದ ಗೀತೆಗಳು ಜನಪ್ರಿಯವಾದವು. ಕಾಳಿಂಗರಾಯರು 'ಅಬ್ಬಾ ಆ ಹುಡುಗಿ', 'ಮಹಾಶಿಲ್ಪಿ', 'ತರಂಗ' ಮುಂತಾದ ಚಿತ್ರಗಳಿಗೆ ಸಂಗೀತ ನೀಡಿದರಾದರೂ ಅವರ ಪ್ರತಿಭೆ ಹೆಚ್ಚಾಗಿ ಬೆಳಗಿದ್ದು ಸುಗಮ ಸಂಗೀತ ಕ್ಷೇತ್ರದಲ್ಲಿ. 'ಕೈವಾರ ಮಹಾತ್ಮೆ' ಚಿತ್ರದ 'ಓಂ ನಮೋ ನಾರಾಯಣಾ', ಕಿತ್ತೂರು ಚೆನ್ನಮ್ಮ' ಚಿತ್ರದ 'ತಾಯಿ ದೇವಿಯನ್ನು ಕಾಣೆ ಹಂಬಲಿಸಿ' ಮೊದಲಾದ ಗೀತೆಗಳನ್ನು ಹಾಡಿ ಜನಪ್ರಿಯತೆ ಗಳಿಸಿದರು.

ಕಾಳಿಂಗರಾಯರು ಚಿತ್ರರಂಗ ಮತ್ತು ಸುಗಮ ಸಂಗೀತದ ಕ್ಷೇತ್ರಕ್ಕೆ ಬರುವ ಮೊದಲು ತಮ್ಮ ಹದಿನಾರನೆಯ ವಯಸ್ಸಿನಿಂದಲೇ ಕರ್ನಾಟಕ ಶಾಸ್ತ್ರೀಯ ಸಂಗೀತ ಕಚೇರಿಗಳನ್ನು ನೀಡಿ ಜನಮೆಚ್ಚುಗೆ ಸಂಪಾದಿಸಿದ್ದರು. ಕರ್ನಾಟಕ ಶಾಸ್ತ್ರೀಯ ಸಂಗೀತ, ಹಿಂದುಸ್ತಾನಿ ಸಂಗೀತದ ಜೊತೆಗೆ ಪಾಶ್ಚಾತ್ಯ ಸಂಗೀತವನ್ನೂ ಅಭ್ಯಾಸ ಮಾಡಿದ್ದರು. "ಕರ್ನಾಟಕ ಹಿಂದುಸ್ತಾನಿ ಶಾಸ್ತ್ರೀಯ ಸಂಗೀತ, ಜಾನಪದ ಧಾಟಿ, ಪಾಶ್ಚಿಮಾತ್ಯ ಶೈಲಿ ಯಾವುದೂ ಆಗಬಹುದು. ಆದರೆ ಹೇಗೆ ಹಾಡಿದರೆ ಕವನದ ಭಾವಕ್ಕೆ ಇಂಬುಗೊಡುವುದೋ ಅದೇ ಮುಖ್ಯ" ಎಂದು ಅವರು ಒತ್ತಿ ಹೇಳುತ್ತಿದ್ದರು. ಅವರಿಗೆ ಕನ್ನಡ ಭಾವಗೀತೆಗಳನ್ನು ಹಾಡಲು ಪ್ರೇರಕ ಶಕ್ತಿಯಾಗಿದ್ದವರಲ್ಲಿ ಪ್ರಮುಖರು ಅ.ನ.ಕೃಷ್ಣರಾಯರು. ಮಿತ್ರರ ಒತ್ತಾಯಕ್ಕೆ ಮಣಿದು 1964ರಲ್ಲಿ ಹುಯಿಲಗೋಳ ನಾರಾಯಣರಾಯರ "ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು"ಎಂಬ ಗೀತೆಯನ್ನು ಸ್ವರಸಂಯೋಜಿಸಿ ಹಾಡಿದರು. ಕನ್ನಡ ರಾಜ್ಯೋದಯದ ನಂತರ ಈ ಹಾಡನ್ನು ಹಾಡಿದ್ದ ಕಾಳಿಂಗರಾಯರಿಗೆ ಕರ್ನಾಟಕ ಸರ್ಕಾರ ಸನ್ಮಾನ ಮಾಡಿತು.

ತೂಗಿರೇ ರನ್ನವಾ, ತೂಗಿರೇ ಚಿನ್ನವಾ', 'ಬಾರಯ್ಯ ಬೆಳದಿಂಗಳೇ', 'ಮೂಡಲ್ ಕುಣಿಗಲ್ ಕೆರೆ', ಬೆಟ್ಟ ಬಿಟ್ಟಿಳಿಯುತ್ತ ಬಂದಾಳೆ ಚಾಮುಂಡಿ' ಮುಂತಾದ ಅನೇಕ ಜಾನಪದ ಗೀತೆಗಳಿಗೆ ಹೊಸ ತಿರುವನ್ನು ಕೊಟ್ಟರು. ಜಿ.ಪಿ.ರಾಜರತ್ನಂರವರ 'ರತ್ನನ ಪದ' ಗಳನ್ನು ಭಾವಪೂರ್ಣವಾಗಿ ಹಾಡಬಹು-ದೆಂಬುದನ್ನು ತೋರಿಸಿಕೊಟ್ಟ ಮೊಟ್ಟ ಮೊದಲಿಗರು ಕಾಳಿಂಗರಾಯರು. "ಬ್ರಹ್ಮಾ ನಿಂಗೆ ಜೋಡಿಸ್ತೀನಿ ಯೆಂಡ ಮುಟ್ಟಿದ್ ಕೈನಾ" ಹಾಡನ್ನು ಕೇಳಿ ಮನಸೋಲದ ಕನ್ನಡಿಗನೇ ಇಲ್ಲ.

ಕಾಳಿಂಗರಾಯರ ನಾಲಿಗೆಯ ಮೇಲೆ ದಾಸರು ನಲಿದರು, ವಚನಕಾರರು ಕುಣಿದರು, ಯೆಂಡ್ಕುಡ್ಕ ರತ್ನ ಮೆರೆದರು, ಜನಪದರು ಉಕ್ಕಿ ಹರಿದರು, ಭಾವಗೀತಕಾರರು ಮಿಂಚಿದರು. 'ಎಲ್ಲಾದರು ಇರು, ಎಂತಾದರು ಇರು', 'ಏರಿಸಿ ಹಾರಿಸಿ ಕನ್ನಡದ ಬಾವುಟ', 'ಯಾರು ಹಿತವರು ನಿನಗೆ', 'ಮಾಡು ಸಿಕ್ಕದಲ್ಲ', 'ಮನವೆಂಬ ಸರಸಿಯಲಿ', 'ಪರಚಿಂತೆ ನಮಗೆ ಏಕೆ ಅಯ್ಯಾ', 'ಹೋದ ವರ್ಷ ಬಂದ ಹಬ್ಬ', 'ಮಂಕುತಿಮ್ಮನ ಕಗ್ಗ', 'ದೇಶಭಕ್ತಿಗೀತೆಗಳು', 'ಹರಿಹರನ ರಗಳೆ', ಎಲ್ಲವನ್ನೂ ಹಾಡಿ ಸೈ ಎನಿಸಿಕೊಂಡರು. ಕರ್ನಾಟಕದಲ್ಲಿ ಮಾತ್ರವಲ್ಲದೇ ದೆಹಲಿ, ಕೊಲ್ಕತ್ತ, ಮುಂಬಯಿ, ಮದ್ರಾಸ್, ಪೂನಾ, ನಾಗಪುರ ಮುಂತಾದ ಕಡೆಗಳಲ್ಲೆಲ್ಲ ಹಾಡಿ ಭಾರತದ ಉದ್ದಗಲಕ್ಕೂ ತಮ್ಮ ಇನಿದನಿಯ ಗಾನಸುಧೆಯನ್ನು ಹರಿಸಿ ಕೀರ್ತಿ ಶಿಖರಕ್ಕೇರಿದರು. ಅವರಿಗೆ 'ಜಾನಪದ ಸಂಗೀತರತ್ನ', 'ಬಾಲಗಂಧರ್ವ', 'ಜಾನಪದ ಕಲಾ ಚಕ್ರವರ್ತಿ', 'ಗಾಯನ ಚಕ್ರವರ್ತಿ', 'ಗಾಯನ ಕಂಠೀರವ', 'ಕನ್ನಡ ಉದಯಗಾನ ಕೋಗಿಲೆ', 'ಸಂಗೀತ ರಸವಿಹಾರಿ', ಮುಂತಾದ ಅನೇಕ ಬಿರುದು ಬಾವಲಿಗಳು ಸಂದಿದ್ದವು.

ಇಂತಹ ಅವಿಸ್ಮರಣೀಯ ಗಾಯಕರೂ, ಸುಗಮ ಸಂಗೀತ ಪ್ರವರ್ತಕರೂ ಆದ ಕಾಳಿಂಗರಾಯರನ್ನು ಕನ್ನಡನಾಡು ನಿರಂತರವಾಗಿ ಅಭಿಮಾನಪೂರ್ವಕವಾಗಿ ನೆನೆಯುತ್ತದೆ. ಈ ಮಹಾನ್ ಚೇತನ 1981ರ ಸೆಪ್ಟೆಂಬರ್ 22 ರಂದು ನಿಧನರಾದರು.


## ಇವರು ನಮ್ಮ ಸಾಹಿತಿಗಳು

# ಡಿ.ವಿ.ಗುಂಡಪ್ಪ

ಕನ್ನಡ ಸಾಹಿತ್ಯ ಮತ್ತು ಪತ್ರಿಕೋದ್ಯಮ ಎರಡರಲ್ಲೂ ಖ್ಯಾತನಾಮರಾಗಿದ್ದ ಡಿ.ವಿ.ಗುಂಡಪ್ಪನವರು ನಾಡು ಕಂಡ ಅದ್ಭುತ ಪ್ರತಿಭೆಗಳಲ್ಲಿ ಒಬ್ಬರು.

ಸಾಹಿತ್ಯ ಕ್ಷೇತ್ರದಲ್ಲಿ ಅಪಾರ ಕೃಷಿಮಾಡಿ ಧ್ರುವತಾರೆ ಎನಿಸಿಕೊಂಡ ಅವರು ಪತ್ರಿಕೋದ್ಯಮದಲ್ಲಿಯೂ ಬಹು ಎತ್ತರಕ್ಕೆ ಬೆಳೆದವರು. ಅವರ ಮಂಕು 'ತಿಮ್ಮನ ಕಗ್ಗ' ಕನ್ನಡ ಸಾಹಿತ್ಯದಲ್ಲಿ ಮೌಲಿಕ ಹಾಗೂ ಜನಪ್ರಿಯ ಕೃತಿಯಾಗಿದೆ.

ಡಿವಿಜಿ ಎಂದೇ ಖ್ಯಾತಿ ಪಡೆದ ದೇವನಹಳ್ಳಿ ವೆಂಕಟರಮಣಯ್ಯ ಗುಂಡಪ್ಪನವರು ಮೂಲತಹ ಕೋಲಾರ ಜಿಲ್ಲೆಯ ಮುಳಬಾಗಿಲು ತಾಲ್ಲೂಕಿನ ದೇವನಹಳ್ಳಿ ಯವರು.



1887 ರ ಮಾರ್ಚ 17 ರಂದು ಜನಿಸಿದ ಅವರು ಆರಂಭದ ಶಿಕ್ಷಣವನ್ನು ಊರಿನಲ್ಲಿಯೇ ಮುಗಿಸಿದರು. ನಂತರ ಕನ್ನಡದ ಜತೆಗೆ ಸಂಸ್ಕೃತ ಹಾಗೂ ಇಂಗ್ಲೀಷ್ ಭಾಷೆಗಳನ್ನು ಅಧ್ಯಯನ ಮಾಡಿದರು.

ಕೌಟುಂಬಿಕ ಸಮಸ್ಯೆಗಳಿಂದಾಗಿ ಅವರು ಶಿಕ್ಷಣವನ್ನು ಮುಂದುವರಿಸಲಾಗಲಿಲ್ಲ. 18ನೇ ವಯಸ್ಸಿನಲ್ಲಿಯೇ ಜೀವನೋಪಾಯವನ್ನು ಹುಡುಕಬೇಕಾಯಿತು.

ಕೆಜಿಎಫ್‌ನ ಖಾಸಗಿ ವ್ಯಕ್ತಿಯೊಬ್ಬರ ಅಂಗಡಿಯಲ್ಲಿ ಗುಮಾಸ್ತರಾಗಿ ಕೆಲಸಕ್ಕೆ ಸೇರಿದರು.

ನಂತರ ಪತ್ರಿಕೋದ್ಯಮದಲ್ಲಿ ತಮ್ಮ ವೃತ್ತಿ ಜೀವನ ಆರಂಭಿಸಿದ ಡಿವಿಜಿಯವರು 'ಭಾರತ್' ಮತ್ತು 'ಕರ್ನಾಟಕ' ಎಂಬ ಕನ್ನಡ ಪತ್ರಿಕೆಗಳನ್ನು ಪ್ರಾರಂಭಿಸಿದರು. ಅಲ್ಲಿಂದ ಮುಂದೆ 'ಸುಮತಿ' ಎಂಬ ವಾರಪತ್ರಿಕೆಯನ್ನೂ ಮತ್ತು 'ಸುಮತಿ ಗ್ರಂಥಮಾಲೆ' ಎಂಬ ಪ್ರಕಾಶನವನ್ನು ಪ್ರಾರಂಭಿಸಿದರು.

ಡಿವಿಜಿಯವರು ಸಂಪಾದಕರಾಗಿ, ಅಂಕಣಕಾರರಾಗಿ ಮತ್ತು ಬರಹಗಾರರಾಗಿ ಪತ್ರಿಕೋದ್ಯಮ ಕ್ಷೇತ್ರಕ್ಕೆ ಅನೇಕ ಕೊಡುಗೆಗಳನ್ನು ನೀಡಿದ್ದಾರೆ. ಡಿವಿಜಿಯವರನ್ನು ಆಧುನಿಕ ಭಾರತೀಯ ಸಾಹಿತ್ಯದ ಒಂದು ಅಶ್ವತ್ಥವೃಕ್ಷ ಎಂದು ಕರೆಯುತ್ತಾರೆ.

ಸಾಹಿತ್ಯದಲ್ಲಿ ಕಾವ್ಯ, ನಾಟಕ, ಶಿಶುಸಾಹಿತ್ಯ, ವಿಚಾರ ವಿಮರ್ಶೆ ಕುರಿತು ಬರೆದಿರುವ ಅವರು, ಜೀವನ ಚರಿತ್ರೆಗಳು, ರಾಜನೀತಿ, ತತ್ವಜ್ಞಾನ, ಪ್ರಜಾಪ್ರಭುತ್ವ, ಸಮಾಜವಿಜ್ಞಾನ, ಸಾರ್ವಜನಿಕ ಜೀವನ ಮುಂತಾದ ವಿಷಯಗಳನ್ನು ಕುರಿತು 60ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ.

ಸ್ವಾತಂತ್ರ್ಯ ಪೂರ್ವದಲ್ಲಿ ಅವರು ಮೈಸೂರು ಪತ್ರಕರ್ತರ ಸಂಘದ ಅಧ್ಯಕ್ಷರಾಗಿ ಸೇವೆಸಲ್ಲಿಸಿದ್ದಾರೆ.

1961 ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಅವರಿಗೆ ಡಿಲಿಟ್ ಪದವಿ ನೀಡಿ ಗೌರವಿಸಿತು. 1967 ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರಕಿತು. 1932 ರಲ್ಲಿ ಮಡಿಕೇರಿಯಲ್ಲಿ ನಡೆದ 18 ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿದ ಹೆಗ್ಗಳಿಕೆ ಅವರದು.

ಬಾಗಲಕೋಟೆಯಲ್ಲಿ 1928 ರಲ್ಲಿ ನಡೆದ ಅಖಿಲಭಾರತ ಕರ್ನಾಟಕ ವೃತ್ತ ಪತ್ರಕರ್ತರ ಪ್ರಥಮ ಸಮ್ಮೇಳನದ ಅಧ್ಯಕ್ಷತೆಯನ್ನೂ ಅವರು ವಹಿಸಿದ್ದರು.

ಕೇಂದ್ರ ಸರ್ಕಾರ ಪದ್ಮಭೂಷಣ ಪ್ರಶಸ್ತಿಯನ್ನೂ ನೀಡಿ ಗೌರವಿಸಿದೆ. ತಮ್ಮ ವಿದ್ವತ್, ಸಾಹಿತ್ಯ ಹಾಗೂ ಪತ್ರಿಕಾ ಕೃಷಿಯಿಂದ ಜನಮಾನಸದಲ್ಲಿ ಚಿರಸ್ಥಾಯಿಯಾಗಿದ್ದ ಡಿವಿಜಿಯವರು 1975ರ ಅಕ್ಟೋಬರ್ 7 ರಂದು ನಿಧನರಾದರು.

### ಹುಟ್ಟುಹಬ್ಬದ ಶುಭಾಶಯಗಳು

2022ನೇ ವರ್ಷದ ಜನವರಿ–ಮಾರ್ಚ್ ತಿಂಗಳಿನಲ್ಲಿ ಹುಟ್ಟುಹಬ್ಬ ಆಚರಿಸುತ್ತಿರುವ ಬೆಸ್ಕಾಂನ ಅಧಿಕಾರಿಗಳು, ಸಿಬ್ಬಂದಿಗೆ "ಬೆಸ್ಕಾಂ ಸ್ನೇಹಿ" ಯ ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು.

– ಸಂಪಾದಕೀಯ ಮಂಡಳಿ

### ಹಾರ್ದಿಕ ಬೀಳ್ಕೊಡುಗೆ

ಹತ್ತು ಹಲವು ವರ್ಷ ಸೇವೆ ಸಲ್ಲಿಸಿ ಬೆಸ್ಕಾಂನ ಏಳಿಗೆಗೆ ಶ್ರಮಿಸಿ 2022ನೇ ವರ್ಷದ ಜನವರಿ–ಮಾರ್ಚ್ ತಿಂಗಳಿನಲ್ಲಿ ನಿವೃತ್ತಿ ಹೊಂದುತ್ತಿರುವ ಅಧಿಕಾರಿಗಳು / ಸಿಬ್ಬಂದಿಗೆ "ಬೆಸ್ಕಾಂ ಸ್ನೇಹಿ"ಯ ಹಾರ್ದಿಕ ಬೀಳ್ಕೊಡುಗೆ.

– ಸಂಪಾದಕೀಯ ಮಂಡಳಿ

# ಯಾಣದ ಪ್ರಯಾಣ

ಹದಿವಯಸ್ಸಿನ ಹೊಸ್ತಿಲಲ್ಲಿದ್ದಾಗ ಯಾಣದ ರಮಣೀಯತೆಯ ಬಗ್ಗೆ ಹಲವು ವಾರ ಪತ್ರಿಕೆಗಳಲ್ಲಿ ಓದಿದ್ದೆ. ಆ ದಟ್ಟ ಕಾಡಿನ ಮಧ್ಯೆ, ಶಿರವನ್ನೆತ್ತಿ ನಿಂತ ಕಾರ್ಮೋಡದಂತಹ ಬೆತ್ತದ್ವಯರ ಮುಂದೆ ಪುಟ್ಟ ಹುಲುಮಾನವನಾಗಿ ನಿಂತು ನೋಡುವ ಮುಗ್ಧ ಕಾಣಸಿನ ಹಂದರವನ್ನೆ ಹೆಣೆದಿದ್ದೆ.

ಅಂದಿನ ಕನಸು ಈ ರೀತಿಯಾಗಿ ನನಸಾಗುತ್ತದೆಂದು ನಾನು ಕನಸ್ಸಿನಲ್ಲೂ ಎಣಿಸಿರಲಿಲ್ಲ. ಅಂತೂ ನಾನು ಯಾಣದ ಪ್ರಯಾಣಕ್ಕೆ ಅಣಿಯಾಗಿದ್ದೆ. ನಮ್ಮ ಜೊತೆ ನಮ್ಮ ಕಾಲೇಜಿನ ಇನ್ನು 39 ವಿದ್ಯಾರ್ಥಿಗಳು ಅಂತಿಮ ವರ್ಷದ ವಿದ್ಯಾರ್ಥಿಯಾದ ಶಕೀಬ್ ಅವರ ಮಾರ್ಗದರ್ಶನದಲ್ಲಿ ಯಾಣಕ್ಕೆ ಟ್ರೆಕ್ಕಿಂಗ್‌ಗೆ ಹೊರೆಟೆವು.

ಕೆಲವು ದಿನಗಳ ಹಿಂದೆ ಬಿಡುಗಡೆಯಾದ "ನಮ್ಮೂರ ಮಂದಾರ ಹೂವೇ" ಚಿತ್ರದಲ್ಲಿ ಅತ್ಯಂತ ಸುಂದರವಾಗಿ ಚಿತ್ರೀಕರಿಸಿದ ಯಾಣದ ಸೌಂದರ್ಯವನ್ನು ಕಂಡ ನಮ್ಮೆಲ್ಲರಲ್ಲೂ ಒಂದು ಹೊಸ ಹುರುಪು, ತವಕ ಮನೆ ಮಾಡಿತ್ತು. ಕೊನೆಗೂ ಎರಡು ವಾಹನಗಳಲ್ಲಿ ಆಸೀನರಾಗಿ ಎಲ್ಲರೂ 18 ನೇ ಆಗಸ್ಟ್ 1996 ರಂದು ಬೆಳಗ್ಗೆ ನಾಲ್ಕು ಗಂಟೆಗೆ ಹೊರಟೆವು.



'ಅಂತಾಕ್ಷರಿ' ಯೊಂದಿಗೆ ಪ್ರಾರಂಭಿಸಿದ ನಮ್ಮ ಪ್ರಯಾಣ ಮುಂದುವರಿದುದ್ದು ಗೊತ್ತಾಗಿರಲಿಲ್ಲ. ಆಶ್ಚರ್ಯವೆಂದರೆ ನಮ್ಮ 'ಅಂತಾಕ್ಷರಿ' ಮುಗಿಯುವ ಹಂತ ತಲುಪಿದಾಗ ಆಗಲೇ 'ಶಿರ್ಸಿ' ಸಮೀಪಿಸಿತ್ತು. ಅಲ್ಲಿಯೇ ಮುಂಜಾನೆಯ ಲಘು ಉಪಹಾರ ಮುಗಿಸಿಕೊಂಡು ಪ್ರಯಾಣ ಮುಂದುವರಿಸಿದೆವು. ಕಾಡಿನ ಮಧ್ಯೆ ವಾಹನ ನಿಲ್ಲಿಸಿ ಟ್ರೆಕ್ಕಿಂಗ್‌ಗೆ ಸಿದ್ಧರಾದೆವು. ಟ್ರೆಕ್ಕಿಂಗ್ ಮೊದಲನೇ ಹಂತದಲ್ಲಿ ನಾವು ಸುಮಾರು ಆರು ಕಿ.ಮೀ.ನಷ್ಟು ದಟ್ಟ ಕಾಡಿನ ನಡುವೆ ನಡೆಯಬೇಕಿತ್ತು. ನಾವೆಲ್ಲಾ ಮಾನಸಿಕವಾಗಿ ಸಿದ್ಧರಾಗುತ್ತಿದ್ದಂತೆ, ನಮ್ಮೆಲ್ಲರಿಂದ ಟ್ರೆಕ್ಕಿಂಗ್ ಮಧ್ಯದಲ್ಲಿ ಅನಾಹುತವೇನಾದರೂ ಸಂಭವಿಸಿದರೆ ಅದಕ್ಕೆ ನಾನೇ ಹೊಣೆಗಾರ ಎಂದು ಪ್ರಮಾಣ ಪತ್ರ ತೆಗೆದುಕೊಳ್ಳಲಾಯಿತು. ನಮ್ಮೆಲ್ಲರಿಗೂ ಒಂದೊಂಡ್ಡು ರೈನ್‌ಪ್ರೂಫ್ ಮ್ಯಾಟ್ ಮತ್ತು ಕೈಚೀಲವನ್ನು ಕೊಟ್ಟರು. ಕೆಲವು ವಿದ್ಯಾರ್ಥಿಗಳು ಚಾಕು ಮತ್ತಿತರ ರಕ್ಷಣಾ ಪರಿಕರಗಳನ್ನು ಸೊಂಟಕ್ಕೆ ಕಟ್ಟಿಕೊಂಡಿದ್ದರು. ಕಾಡು ಪ್ರಾಣಿಗಳೇನಾದರೂ ಬಂದರೆ ಎದುರಿಸಲೆಂದು ಮುನ್ನೆಚ್ಚರಿಕೆಯ ಕ್ರಮವಾಗಿ ಕಾಡು ಪ್ರಾಣಿಗಳ ಹೆಸರನ್ನು ಪ್ರೇರೇಪಿಸಲು ನಾವು 'ಗೋರಿಲ್ಲಾ ತಂಡ' ಮತ್ತು 'ಪಾಂಡಾ ತಂಡ' ಎಂಬ ಎರಡು ತಂಡಗಳಾಗಿ ಬೇರ್ಪಟ್ಟೆವು. ಪ್ರತಿಯೊಂದು ತಂಡಕ್ಕೂ ಒಂದು ಮ್ಯಾಗ್ನೆಟಿಕ್ ಕಂಪಾಸ್‌ಗಳನ್ನೂ ನೀಡಲಾಯಿತು ಮತ್ತು ಅದರ ಜೊತೆಗೆ ಕೆಲವು Instructions ಕೂಡ ಕೊಟ್ಟರು. ಗೊರಿಲ್ಲಾ ತಂಡದ ಸದಸ್ಯರಾದ ನಾವೆಲ್ಲರು, ಪಾಂಡಾ ತಂಡ ಹೊರಟ ಹದಿನೈದು ನಿಮಿಷಗಳ ನಂತರ ಕಾಡಿನ ದಾರಿಯನ್ನು ಸೀಳುತ್ತ ಹೊರಟೆವು. ಕಾಡಿನ ನಡುವೆ ಜಿಗಣೆ (leach) ಗಳ ಕಾಟ ತಪ್ಪಿಸಿಕೊಳ್ಳಲು ಎಲ್ಲರೂ ತಮ್ಮ ತಮ್ಮ ಕರವಸ್ತ್ರ (hand kerchief) ದಲ್ಲಿ ಉಪ್ಪನ್ನು ಕಟ್ಟಿಕೊಂಡು ಹೊರಟಿದ್ದೆವು.

ಅಡವಿಯ ನಡುವೆ ಕಾಲುದಾರಿಯಲ್ಲಿ ನಕಾಶೆ ಮತ್ತು ಕಂಪಾಸ್‌ನ ಸಹಾಯದಿಂದ ಸ್ವಲ್ಪ ದೂರ ಕ್ರಮಿಸಿದೆವು. ನಡೆಯುವ ದಾರಿಯಲ್ಲಿ ಟಿಸಿಲುಗಳು (Diversions) ಬಂದಾಗ ಚಿನ್ಹೆಗಳ ಸಹಾಯದಿಂದ ನಡೆಯಬೇಕಿತ್ತು. ಒಂದು ಕಡೆ ಮುಟ್ಟಿದಾಗ ಅಲ್ಲಿಂದ 275 ಗೆ (ಉತ್ತರ ದಿಕ್ಕನ್ನು ಆದರ್ಶವಾಗಿಟ್ಟುಕೊಂಡು) ಸಾಗಬೇಕಾಗಿತ್ತು. ಸ್ವಲ್ಪ ಮುಂದೆ ಹೋದಾಗ ನಕ್ಷೆಯಲ್ಲಿ ತೋರಿಸಿದ ಒಂದು ಮನೆ ಕಾಣುತಿತ್ತು. ದೂರದಿಂದಲೇ ಇದು 'ಹಸಿಮಣೆನsssss' ಎಂದು ಕೂಗಿದಾಗ ಅತ್ತ ಕಡೆಯಿಂದ 'ಹೌದೂsssss' ಎಂದು ಉತ್ತರ ಬಂತು. ಅಲ್ಲಿ ಹೋಗಿ ಯಥೇಚ್ಛವಾಗಿ ನೀರು ಕುಡಿದೆವು. ಸುಂದರವಾದ ಝುರಿಗಳು ಜುಳು ಜುಳು ಶಬ್ದ ಮಾಡುತ್ತಾ ಕಾಡಿನಲ್ಲಿ ನಮ್ಮ ಜೊತೆ ಜೊತೆಗೆ ಹರಿಯುತ್ತಿದ್ದವು. ಕಾಡು ಪ್ರಾಣಿಗಳಿಂದ ರಕ್ಷಣೆ ಪಡೆಯಲು ಪ್ರತಿಯೊಬ್ಬರು ಒಂದೊಂದು ಕೋಲನ್ನು ಕೈಯಲ್ಲಿ ಹಿಡಿದೆವು. ಆ 'ಹಸೆಮಣೆ' ಎಂಬ ಚಿಕ್ಕಗ್ರಾಮ (3 ಮನೆ) ವನ್ನು ತಲುಪಿದಾಗ ಅವರಲೊಬ್ಬರು ನಮ್ಮ ಬಗ್ಗೆ ಯಾವ ಊರು ಮುಂತಾದವುದಾಗಿ ವಿಚಾರಿಸಿದನು.

ಬಿಸಾಕಲು ಹೇಳಿದ ಅದರ ವಾಸನೆಯನ್ನು 3, 4 ದಿನ ಸತತವಾಗಿ ತೆಗೆದುಕೊಂಡರೆ ಮುಖವು ಗಡಿಗೆ (ಮಡಿಕೆ)ಯಷ್ಟು ದಪ್ಪದಾಗುತ್ತದೆಂದೂ ಮತ್ತು ಊದಿಕೊಂಡ ಮುಖ ಸಾಧಾರಣ ಸ್ಥಿತಿಗೆ ಬರಲು ಮೂರ್‍ನಾಲ್ಕು ದಿನಗಳು ಬೇಕೆಂದು ಹೇಳಿದರು. ಅದನ್ನು ಕೇಳಿದ ಎಲ್ಲರೂ ತಮ್ಮ ತಮ್ಮ ಕೋಲುಗಳನ್ನು ಅಲ್ಲಿಯೇ ಬಿಟ್ಟು ಬೇರೆ ಕೋಲುಗಳನ್ನು ತೆಗೆದುಕೊಂಡು ಅವರಿಗೆ ತುಂಬಾ ಧನ್ಯವಾದಗಳನ್ನು ಹೇಳಿ ಮುಂದೆ ಹೊರಟೆವು. ಸಾವಧಾನವಾಗಿ ಹರಿಯುತ್ತಿದ್ದ ಚಿಲುಮೆಗಳನ್ನೂ ನೀರಿನ ಝುರಿಗಳನ್ನೂ ದಾಟಿಕೊಂಡು ಬಂದಾಗ ನಮ್ಮ ಎದುರಿಗೆ ಬಂದದ್ದು ದಟ್ಟವಾಗಿ ಎತ್ತರೆತ್ತರ ಮರಗಳಿಂದ ಆವೃತವಾದ ಒಂದು ಶಿಖರಪ್ರಾಯ ಎದುಸಿರು ಬಿಡುತ್ತಾ ಕಾನನದ ನಡುವೆ ನುಸುಳುತ್ತಾ ಹೊರಟೆವು ಅದೃಷ್ಟವೆಂಬಂತೆ ಯಾವುದೇ ಕಾಡುಪ್ರಾಣಿಗಳು ದಾಳಿ ಮಾಡಲಿಲ್ಲ ಮತ್ತು ಜಿಗಣೆಗಳು ತೊಂದರೆ ಕೊಡಲಿಲ್ಲ.

– **ವೆಂಕಟೇಶ್ ವಿ.**, ಉ.ಪ್ರ.ವ್ಯ (ಗು.ಪ್ರ ಮತ್ತು ಸು), ಬೆವಿಕಂ.

ಮುಂದುವರಿಯುವುದು.....

# ಆರೋಗ್ಯವೇ ಭಾಗ್ಯ



## ಜೇನುತುಪ್ಪ

ಮಾನವನಿಗೆ ಪ್ರಕೃತಿದತ್ತವಾಗಿ ಬಂದ ಅಮೃತ ಸಮಾನವಾದದ್ದೆಂದರೆ ಜೇನುತುಪ್ಪ.

ಜೇನಿನಲ್ಲಿ ಅಪಾರ ಔಷಧೀಯ ಗುಣಗಳಿವೆ. ಭಾರತದಲ್ಲಿ ಬಹುಪುರಾತನ ಕಾಲದಿಂದಲೂ ಜೇನು ಬಳಕೆಯಲ್ಲಿದೆ. ಅದು ರುಚಿ ಮತ್ತು ಪರಿಮಳವನ್ನು ಹೊಂದಿದೆ. ಜೇನಿನಲ್ಲಿ ರೋಗ ನಿರೋಧಕ ಮತ್ತು ರೋಗ ನಿವಾರಕ ಗುಣಗಳಿವೆ.



ಜೇನುತುಪ್ಪದ ಕ್ರಮಬದ್ಧ ಸೇವನೆಯಿಂದ ಕೆಮ್ಮು, ದಮ್ಮು, ಮಧುಮೇಹ, ಬಹುಮೂತ್ರ ಕಾಯಿಲೆಗಳು ಹತೋಟಿಗೆ ಬರುತ್ತವೆ. ನಿತ್ರಾಣ ನಿವಾರಣೆಗೆ, ಬೆಳಗಿನ ಆಯಾಸ ನಿವಾರಣೆಗೆ, ಬಾಯಿಹುಣ್ಣು, ವಸಡು ಹುಣ್ಣು, ಹಲ್ಲುನೋವು ನಿವಾರಣೆಗೆ ಜೇನುತುಪ್ಪವನ್ನು ಬಳಸುತ್ತಾರೆ.

ಮಕ್ಕಳಲ್ಲಿ ರೋಗ ನಿರೋಧಕ ಶಕ್ತಿ ಹೆಚ್ಚಿ ಲವಲವಿಕೆ ಮತ್ತು ನವಚೈತನ್ಯ ಉಂಟಾಗಲು ಅರ್ಧ ಚಮಚ ಜೇನುತುಪ್ಪ ಹಾಗೂ ಅರ್ಧ ಹೋಳು ನಿಂಬೆ ಹಣ್ಣಿನ ರಸ ಮಿಶ್ರಮಾಡಿ ಕುಡಿಸುತ್ತಾರೆ.

ಆಮ್ಲಪಿತ್ತ, ಹೈಪರ್ ಅಸಿಡಿಟಿ, ಅಜೀರ್ಣ, ಹುಳಿತೇಗು ನಿವಾರಣೆಗೆ ಪ್ರತಿದಿನ ಬೆಳಿಗ್ಗೆ ಒಂದು ಚಮಚ ಜೇನು ಸೇವಿಸುತ್ತಾರೆ.

## ನುಗ್ಗೆಸೊಪ್ಪು

ನುಗ್ಗೆಯು ಬಹಳಷ್ಟು ಔಷಧೀಯ ಗುಣಗಳನ್ನು ಹೊಂದಿದೆ.

ನಾವು ನುಗ್ಗೆಕಾಯಿಯನ್ನು ಧಾರಾಳವಾಗಿ ಉಪಯೋಗಿಸಿದಂತೆ ಅದರ ಸೊಪ್ಪನ್ನು ಬಳಸುವುದು ಕಡಿಮೆ. ಸೊಪ್ಪಿನಲ್ಲಿ ಅಧಿಕ ಪೌಷ್ಟಿಕಾಂಶಗಳು ಹಾಗೂ ವಿಟಮಿನ್ ಎ ಮತ್ತು ಸಿ ಅನ್ನಾಂಗಗಳಿರುವುದು ಹೆಚ್ಚಿನವರಿಗೆ ತಿಳಿದಿರಲಿಕ್ಕಿಲ್ಲ.



ಮಕ್ಕಳ ಆರೋಗ್ಯ ಮತ್ತು ಉತ್ತಮ ಬೆಳವಣಿಗೆಗೆ ನುಗ್ಗೆ ಸೊಪ್ಪಿನ ರಸ ಸೇವನೆ ಸಹಕಾರಿ ಎನ್ನಲಾಗಿದೆ, ಗರ್ಭಿಣಿಯರ ಆರೋಗ್ಯಕ್ಕೆ, ಹೆರಿಗೆ ನಂತರ ಎದೆಹಾಲು ವೃದ್ಧಿಸಲು, ಚರ್ಮ ದೋಷ ಹಾಗೂ ಕಣ್ಣಿನ ದೃಷ್ಟಿ ದೋಷ ನಿವಾರಣೆಗೆ ನುಗ್ಗೆ ಸೊಪ್ಪಿನ ಸಾರು, ಪಲ್ಯ ಹೆಚ್ಚು ಉಪಯುಕ್ತ.

ಊಟದಲ್ಲಿ ಆಗಾಗ್ಗೆ ನುಗ್ಗೆ ಸೊಪ್ಪನ್ನು ಬಳಸುತ್ತಿದ್ದರೆ ಮೂಲವ್ಯಾಧಿ ನಿವಾರಣೆಯಾಗುತ್ತದೆ.

ನುಗ್ಗೆ ಸೊಪ್ಪನ್ನು ಹೆಸರು ಕಾಳಿನಜತೆ ಬೇಯಿಸಿ ಪಲ್ಯ ಮಾಡಿ ಉಪಯೋಗಿಸಿದರೆ ತಲೆಸುತ್ತು ನಿವಾರಣೆಯಾಗುವುದು ಎಂದು ಹಿರಿಯರು ಹೇಳುತ್ತಾರೆ. ಹಾಗಾಗಿ ನುಗ್ಗೆಸೊಪ್ಪು ಬಹೂಪಯೋಗಿ ತರಕಾರಿಯಾಗಿದೆ.

ಕಗ್ಗದ ಬೆಳಕು

## ಭೂಮಿಯ ಗಾಣದಲ್ಲಿ ಶ್ರಮಿಸು..



ಸಮತೆಸಂಯಮಶಮಗಳಂ ಭವವನೋಲಗಿಸೆ |
ಸಮನಿಪುದು ಮತಿಯ ಹದವಾತ್ಮಾನುಭವಕೆ ||
ಮಮತೆಯಳವಿಂ ಜ್ಞಾನ; ಪಾಂಡಿತ್ಯದಿಂದಲ್ಲ |
ಶ್ರಮಿಸಿಳೆಯ ಗಾಣದಲಿ – ಮಂಕುತಿಮ್ಮ ||

'ಸಮಚಿತ್ತ, ಇಂದ್ರಿಯನಿಗ್ರಹ, ಶಾಂತಿಯಿಂದ ಈ ಲೌಕಿಕದ ಬಾಳನ್ನು ಓಲೈಸಿಕೊಂಡರೆ ಬುದ್ಧಿ ಪರಿಪಕ್ವತೆ ಹೊಂದುತ್ತದೆ. ಇದರಿಂದಲೇ ಆತ್ಮಾನುಭವವಾಗಲು ಸಾಧ್ಯ. ಮಮತೆ ಅಳಿದರಷ್ಟೇ ಜ್ಞಾನ, ಪಾಂಡಿತ್ಯದಿಂದಷ್ಟೇ ಜ್ಞಾನ ಸಿದ್ಧಿಸದು. ಹಾಗಾಗಿ ಈ ಭೂಮಿಯ ಗಾಣದಲ್ಲಿ ನೀನು ಶ್ರಮಿಸು' ಎನ್ನುತ್ತದೆ ಈ ಕಗ್ಗ.

ಮಾನವನು ಭವಿಷ್ಯದ ಬಗ್ಗೆ ಹಲವು ಕನಸುಗಳನ್ನು ಜೋಡಿಸಿರುತ್ತಾನೆ. ಯಾವುದೋ ಧ್ಯೇಯೋದ್ದೇಶಕ್ಕಾಗಿ ಬಾಳುತ್ತಾನೆ. ಆತನ ಪಾಂಡಿತ್ಯ, ಅಧ್ಯಯನಗಳೆಲ್ಲ ಈ ನಿಟ್ಟಿನಲ್ಲಿಯೇ ಕೇಂದ್ರೀಕೃತವಾಗಿರುತ್ತದೆ. ಆದರೆ ಒಳಿತು-ಕೆಡುಕುಗಳನ್ನು ಅರಿತಿದ್ದರೂ ಸರಿಯಾದ ನಿರ್ಣಯಗಳನ್ನು ತೆಗೆದುಕೊಳ್ಳಲು ಸೋಲುತ್ತಾನೆ. ಎಲ್ಲವನ್ನೂ ಕೆದಕಿ ನೋಡುತ್ತ ನಿರಾಶೆಗೊಳ್ಳಲು ಸೋಲುತ್ತಾನೆ. ಎಲ್ಲವನ್ನೂ ಕೆದಕಿ ನೋಡುತ್ತ ನಿರಾಶೆಗೊಳ್ಳುವ ಇರುಳುಗಣ್ಣಿನ ಹುಡುಕಾಟದಂತೆ ಅವನ ಮನಸ್ಸು ಅಲೆದಾಡುತ್ತದೆ.

ಬೌದ್ಧಿಕವಾಗಿ ಹೀಗೆಯೇ ಬಾಳಬೇಕೆಂಬ ತಿಳವಳಿಕೆ, ಆದರ್ಶಗಳಿದ್ದರೂ ಮನಸ್ಸಿಗೆ ತೋಚಿದಂತೆ ಬದುಕುತ್ತಾನೆ. ಎಲ್ಲಿಯವರೆಗೆ ತನ್ನ ದ್ವಂದ್ವವನ್ನು ಅರ್ಥೈಸಿಕೊಳ್ಳುವುದಿಲ್ಲವೋ ಅಲ್ಲಿಯವರೆಗೆ ವ್ಯಕ್ತಿಯ ವಿಕಾಸವೈ ಅಸಾಧ್ಯ. ವಿದ್ಯೆ ಇದ್ದರೂ ನಿಶ್ಚಿತತೆ ಇಲ್ಲದ, ವಿದ್ವಾಂಸನಾದರೂ ವಿಧ್ವಂಸಕನಾಗುವ ಶೋಚನೀಯ ಸ್ಥಿತಿಗೆ ಕಾರಣ ಮನಸ್ಸಿನ ಚಂಚಲತೆ, ವಿವೇಕದ ಹಿಡಿತಕ್ಕೆ ನಿಲುಕದ ಭಾವಾದ್ದೇಶ.

ಆತ್ಮಾನಂದವು ಅನುಭವಕ್ಕೆ ನಿಲುಕಲು ಬುದ್ಧಿಯ ಪರಿಪಕ್ವತೆ ಹೊಂದಬೇಕು. ಇದಕ್ಕೆ ಪುಸ್ತಕದ ಓದು, ಪದವಿಗಳಿಂದಷ್ಟೇ ಸಾಧ್ಯವಿಲ್ಲ. ಓದಿಯೋ, ನೋಡಿಯೋ, ಕೇಳಿಯೋ ತಿಳಿದ ವಿಚಾರ ಆಂತರ್ಯಕ್ಕಿಳಿಯದಿದ್ದರೆ ಅದು ಮಾಹಿತಿ ಸಂಗ್ರಹವಷ್ಟೇ ಆಗಬಹುದು. ಹಾಗಾಗಿ ಮನಸ್ಸೆಂಬ ಕುದುರೆಯನ್ನು ವಿವೇಚನೆಯ ಕಡಿವಾಣದಿಂದ ನಿಯಂತ್ರಿಸಬೇಕು. ಇದಕ್ಕೆ ಕೆಲವು ಮೌಲ್ಯಗಳನ್ನು ಅನುಸರಿಸಬೇಕು, ಯಾರನ್ನೂ ದ್ವೇಷಿಸಿದ ಹೃದಯವಂತಿಕೆ ಅಭ್ಯಾಸವಾಗಬೇಕು. ಅಂತರಂಗದಲ್ಲಿ ಇಂಥ ಸಮಾನತೆಯ ಭಾವವಿದ್ದರಷ್ಟೇ ಅದು ಬಾಹ್ಯ ಚರ್ಯೆಯಲ್ಲೂ ಕಾಣಿಸಿಕೊಳ್ಳುತ್ತದೆ.

ಇಂದ್ರಿಯಗಳೊಡ್ಡುವ ಆಕರ್ಷಣೆಗಳಿಗೆ ಬಲಿಯಾಗುವ ಮನಸ್ಸು, ಬುದ್ಧಿಯ ಮಾತನ್ನು ಆಲಿಸದು. ಇಂದ್ರಿಯಗಳ ಹತೋಟಿ ವ್ಯಕ್ತಿಯದ್ದಾಗಿರಬೇಕೇ ಹೊರತು, ಇಂದ್ರಿಯಗಳೇ ವ್ಯಕ್ತಿಯನ್ನು ಕುಣಿಸುವಂತಿರಬಾರದು. ಬೇಕೆನುವ ದಾಹಕ್ಕೆ ಸಿಲುಕಿ ಉದ್ವೇಗಕ್ಕೆ ಒಳಗಾಗುವ ಮನಸ್ಸನ್ನು ಬುದ್ಧಿಯ ವಶದಲ್ಲಿರಿಸಿದರೆ ಸಂಯಮ ಸಿದ್ಧಿಸುತ್ತದೆ. ಜೀವನರಂಗದಲ್ಲಿ ಆಕಸ್ಮಿಕವಾಗಿ ಘಟಿಸುವ ಸುಖ-ದುಃಖಗಳಲ್ಲಿ ಭಾವೋದ್ವೇಗಕ್ಕೆ ಒಳಗಾಗದಿರುವ ಶಾಂತಚಿತ್ತ ಇರಬೇಕು. ಬದುಕಿನ ಏರಿಳಿತಗಳನ್ನು ಒಂದು ಬದಲಾವಣೆ ಎಂದು ಸ್ವೀಕರಿಸುತ್ತಾ ಮನಸ್ಸು ಕ್ಷೋಭೆಗೊಳಗಾಗದಂತೆ ಎಚ್ಚರದಲ್ಲಿರುವುದು ನೈಜ ಸಾಧನೆ. ಹೀಗೆ ಸಮತೆ, ಸಂಯಮ, ಶ್ರಮಗಳು ವ್ಯಕ್ತಿತ್ವಕ್ಕೆ ಆಧಾರವಾಗಿದ್ದಾಗ ಬುದ್ಧಿಯ ಮಂಕಾಗದು, ಮನಸ್ಸು ಚಂಚಲಗೊಳ್ಳದು, ಇದರಿಂದಾಗಿ ನಿರ್ಮೋಹಿಯಾಗಿರುವುದು ರೂಢಿಯಾಗುತ್ತದೆ.

ಆತ್ಮೋದ್ಧಾರ ಹೊಂದಲು ಪಾಂಡಿತ್ಯ ಇರಬೇಕೆಂದಿಲ್ಲ. ಸದ್ಗುಣಗಳನ್ನು ಅರಿತು ಪಾಲಿಸುವ, ವಿವೇಚನೆ ಕಳೆದುಕೊಳ್ಳದ, ಮೋಹಪಾಶಕ್ಕೆ ಸಿಲುಕದವನೇ ನಿಜವಾದ ಜ್ಞಾನಿ. ಆತನು ಇಹದ ಬಾಳುವೆಯನ್ನು ಬಳಸಿಕೊಂಡೇ ಆತ್ಮಾನಂದವನ್ನು ಪಡೆಯುತ್ತಾನೆ. ಭೂಮಿಯ ಬದುಕಿನ ಗಾಣಕ್ಕೆ ಸಿಲುಕಿ, ಕಷ್ಟ-ಕೋಟಲೆಗಳಿಂದ ಅರೆಯಲ್ಪಟ್ಟಾಗ ಅಹಂಕಾರದಿಂದ ಮುಕ್ತರಾಗಲು ಸಾಧ್ಯ. ಇಳೆಯ ಬಾಳುವೆಯ ಸಂಕಷ್ಟಕ್ಕೆ ಸಿಲುಕಿದ ಜೀವದ ಸತ್ಯ ಅತಿಶಯವಾಗುತ್ತದೆ. ಜೀವೋತ್ಕರ್ಷದ ಹಾದಿ ಸ್ಪಷ್ಟವಾಗುತ್ತದೆ.

**ಡಿ.ವಿ.ಗುಂಡಪ್ಪ ಅವರ (ಕಗ್ಗದ ಬೆಳಕು)**

ಬೆವಿಕಂ
BESCOM

# 73 ನೇ ಗಣರಾಜ್ಯೋತ್ಸವ ಆಚರಣೆಯ ಚಿತ್ರಿಕೆಗಳು














## ಸಂಪಾದಕ ಮಂಡಳಿ

| | |
|---|---|
| **ಶ್ರೀ ಪಿ.ರಾಜೇಂದ್ರ ಚೋಳನ್**, ವ್ಯವಸ್ಥಾಪಕ ನಿರ್ದೇಶಕರು | ಅಧ್ಯಕ್ಷರು |
| **ಶ್ರೀ ದರ್ಶನ್ ಜೆ.**, ನಿರ್ದೇಶಕರು (ಹಣಕಾಸು) | ಮುಖ್ಯ ಸಂಪಾದಕರು |
| **ಶ್ರೀ ನಾಗಾರ್ಜುನ. ವಿ**, ನಿರ್ದೇಶಕರು (ತಾಂತ್ರಿಕ) | ಮುಖ್ಯ ಸಂಪಾದಕರು |
| **ಶ್ರೀ ವೆಂಕಟೇಶ್‌ಮೂರ್ತಿ. ಆರ್**. ಪ್ರಧಾನ ವ್ಯವಸ್ಥಾಪಕರು (ಗ್ರಾ.ಸಂ.) | ಸಂಪಾದಕರು |
| **ಶ್ರೀ ಕೆ. ತಿಪ್ಪೇಸ್ವಾಮಿ**, ಪ್ರಧಾನ ಕಾರ್ಯದರ್ಶಿ, ಕವಿಮಂ ಇಂಜಿನಿಯರುಗಳ ಸಂಘ | ಸದಸ್ಯರು |
| **ಶ್ರೀ ಎಸ್.ಆರ್.ರಾಜನಾಯಕ್**, ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ನೌಕರರ ಸಂಘ | ಸದಸ್ಯರು |
| **ಶ್ರೀ ರಾಮಚಂದ್ರರೆಡ್ಡಿ**, ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಲೆಕ್ಕಾಧಿಕಾರಿಗಳ ಸಂಘ | ಸದಸ್ಯರು |
| **ಶ್ರೀ ಎಂ. ರವೀಂದ್ರ**, ಕವಿಪ್ರನಿನಿ ಎಸ್ಸಾಂಗಳ ಪ.ಜಾತಿ ಮತ್ತು ವರ್ಗದವರ ಅಧಿಕಾರಿಗಳ ಸಂಘ | ಸದಸ್ಯರು |
| **ಶ್ರೀ ಬಿ.ಮನೋಜ್‌ಕುಮಾರ್**, ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಡಿಪ್ಲೋಮಾ ಇಂ. ಸಂಘ | ಸದಸ್ಯರು |


## ಮನವಿ

**ಬೆಸ್ಕಾಂ ಸ್ನೇಹಿ** ಗೃಹಪತ್ರಿಕೆಯಲ್ಲಿ ಪ್ರಕಟಣೆಗಾಗಿ ನಿಮ್ಮ ಅಭಿಪ್ರಾಯ, ಸಲಹೆ, ಲೇಖನ, ಕಛೇರಿಯಲ್ಲಿ ಏರ್ಪಡಿಸಿದ ಕಾರ್ಯಕ್ರಮ, ಸಮಾರಂಭಗಳ ಬಗ್ಗೆ ವರದಿಗಳು, ಅಧಿಕಾರಿ / ಸಿಬ್ಬಂದಿ ವರ್ಗದವರ ಸಾಧನೆಗಳ ಬಗ್ಗೆ ಮಾಹಿತಿಗಳನ್ನು ಕಳುಹಿಸಬೇಕಾದ ವಿಳಾಸ : **ಪ್ರಧಾನ ವ್ಯವಸ್ಥಾಪಕರು (ಗ್ರಾ.ಸಂ.) ನಿಗಮ ಕಾರ್ಯಾಲಯ, ಬಿ.ವಿ.ಕಂಪನಿ, ಕೆ.ಆರ್.ವೃತ್ತ, ಬೆಂಗಳೂರು-560 001.**

ಇ-ಮೇಲ್ ವಿಳಾಸ : gmcr@bescom.co.in


ಬೆವಿಕಂ BESCOM

**ವಿದ್ಯುತ್ ಸಂಬಂಧಿತ ಯಾವುದೇ ಸಹಾಯಕ್ಕಾಗಿ 24 ಗಂಟೆಗಳ ಸಹಾಯವಾಣಿ 1912**

**ಇ-ಮೇಲ್ ವಿಳಾಸ** : helplinebescom@gmail.com **ವೆಬ್‌ಸೈಟ್** : www.bescom.org